### ಸವಿ ವಾಹಿನಿ

ಬರುವ ಪ್ರತಿಯೊಂದು ದಿನವೂ ಶುಭದಿನವೇ. ಆದರೆ ಅದನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಅವಲಂಬಿಸಿದೆ.

### ದಿನ ಪಂಚಾಂಗ

ಆಗಸ್ಟ್, 7–2026 ಗ್ರೀಷ್ಮ ಋತು, ಆಷಾಢ ಮಾಸ, ಬಹುಳ ಪಕ್ಷ. ನವಮಿ ತಿಥಿ ಮ–1:39
ಕೃತಿಕ ನಕ್ಷತ್ರ ರಾ–4:56
ರಾಹುಕಾಲ ಬೆ–10:50–12:25
ಆಡಿ ಕೃತ್ತಿಕ, ಆಷಾಢ/ಆಡಿ ಶುಕ್ರವಾರ, ರಾಮೇಶ್ವರೀ ಜಾತ್ರೆ, ಬೆಂ.ಕುಮಾರಶೈಲ ಕೃತ್ತಿಕೋತ್ಸವ, ಬೆಂ. ಕುಮಾರಶೈಲ ರಥ, ನೆಲೋಗಿ ವೇದಾನಂದ ಆರಾಧನೆ

# ಬನ್ನಂಜೆ ಗೋವಿಂದಾಚಾರ್ಯ ಎಂಬ ವಿಶ್ವವಿದ್ಯಾಲಯ




ಬನ್ನಂಜೆಯವರು ಆಸ್ತಿಕರಿಗೆ ಮೈಲಿಗೆಯಾಗಿ, ನಾಸ್ತಿಕರಿಗೆ ಮಡಿವಂತರಾಗಿ ಕಂಡದ್ದು ಇಂಥ ಕ್ರಾಂತಿಕಾರಕ ವಿಚಾರಗಳಿಂದಲೇ ಅಂತ ಅನಿಸಲು ಕಾರಣ, ಅವರು ಚಿಂತನೆಗಳಲ್ಲಿ ಹೊಸತನ್ನು ಹೇಳುವ ವೈಚಾರಿಕ ಕ್ರಾಂತಿಯ ಬೀಜವಿರುವುದರಿಂದ! ನಾವೆಲ್ಲ ಓದಿರುವ, ನಮಗರಿವಿರುವ ವಿಷಯಗಳನ್ನು, ವಿಚಾರಗಳನ್ನು ಬನ್ನಂಜೆಯವರು ಹೇಳುವ ಪರಿಯೇ ಅನನ್ಯ ಮತ್ತು ಅದ್ಭುತ! ಇದ್ದುದ್ದನ್ನು ಇದ್ದ ಹಾಗೆ ಅವರು ಸ್ವೀಕರಿಸುವಾಗಲೂ ಅದಕ್ಕೊಂದು ಹೊಸ ಸ್ಪರ್ಶ ನೀಡಿಯೇ ಸ್ವೀಕರಿಸಬಲ್ಲರು. ಯಾರೂ ಸೃಷ್ಟಿಸದ ಹೊಸತನ್ನು ಸೃಷ್ಟಿಸಿಯೇ ಸಮಾಜಕ್ಕೆ ನೀಡಬಲ್ಲರು. ಅದು ಕಾರಣವಾಗಿ ಡಿವಿಜಿ, ಮಾಸ್ತಿ, ಬೇಂದ್ರೆ, ಪು.ತಿ.ನ. ಮುಂತಾದವರು ಅವರ ಬರೆಹಗಳನ್ನು ಮೆಚ್ಚಿ ಹರಸಿದ್ದರು. ಸಂಸ್ಕೃತದ ಉತ್ತಮ ಕೃತಿಗಳು ನಿಮ್ಮಿಂದ ಕನ್ನಡಕ್ಕೆ ಬರಬೇಕು ಎನ್ನುತ್ತಿದ್ದರಂತೆ ಪುತಿನರು ಭೇಟಿಯಾದಾಗಲ್ಲೆಲ್ಲ! ಅವರ ವಾತ್ಸಲ್ಯವನ್ನು ಮರೆಯಲಿ ಹೇಗೆ ಎನ್ನುತ್ತಾರೆ ಬನ್ನಂಜೆಯವರು. ಪುತಿನರು ದೃಷ್ಟಿಶಕ್ತಿಯನ್ನು ಕಳೆದುಕೊಂಡಾಗ ಅವರನ್ನು ಕಾಣಲು ಬನ್ನಂಜೆಯವರು ಹೋದಾಗ, ಬನ್ನಂಜೆ, ನನಗೆ ನಿಮ್ಮನ್ನು ಕಾಣಲಾಗುತ್ತಿಲ್ಲ. ಮುಟ್ಟಿ ನೋಡಲೆ? ಎಂದು ಮುಡಿಯಿಂದ ಅಡಿಯತನಕ ಪೂಸಿ ಪ್ರೀತಿಪೂರವನ್ನು ಹರಿಯಿಸಿದ ಆ ಹೃದಯವಂತಿಕೆಯ ಬಗ್ಗೆ ಬನ್ನಂಜೆಯವರೇ ಬರೆದುಕೊಂಡಿದ್ದಾರೆ.

ಬನ್ನಂಜೆಯವರು ಭಾವಪ್ರಧಾನ ಅಧ್ಯಾತ್ಮದ ಜೀವಿಯೆನಿಸುತ್ತದೆ ನನಗೆ. ಎಷ್ಟು ಅಂದರೆ ಭಾಷಣ, ಉಪನ್ಯಾಸ, ಯಾವುದೋ ವಿಚಾರಗಳನ್ನು ಆಡುವ ಸಂದರ್ಭಗಳಲ್ಲಿ ಮಾತಾಡುತ್ತಿರುವಾಗಲೇ ಅವರು ದುಃಖದ ಉದ್ವೇಗಕ್ಕೆ ಒಳಗಾಗಿದ್ದನ್ನು ಎಷ್ಟು ಜನ ಕಾಣಲಿಲ್ಲ ಹೇಳಿ? ಕನ್ನಡ ಸಾಹಿತ್ಯದೊಂದಿಗೆ, ಸಾಹಿತಿಗಳೊಂದಿಗೆ ಅವರು ನಿಕಟ ಸಂಪರ್ಕವನ್ನು ಹೊಂದಿದ್ದರು. ಬೇಂದ್ರೆಯವರ ಬರೆಹದ ಶಕ್ತಿಯನ್ನು ನಿರ್ವಚಿಸಲು ಬನ್ನಂಜೆಯವರಲ್ಲದೆ ಅನ್ಯರಿಗೆ ಸಾಧ್ಯವಿಲ್ಲವೇನೋ! ಅಷ್ಟು ಅಸ್ಖಲಿತ, ನಿಖರ ಮತ್ತು ಸುಸ್ಪಷ್ಟ ಅರ್ಥವ್ಯಾಖ್ಯಾನ ಅವರಿಂದಾಗಿದೆ.

ಕನಕೋಪನಿಷತ್ತು ಬನ್ನಂಜೆಯವರ ಅದ್ಭುತ ಕೃತಿ. ಸೃಷ್ಟಿಶೀಲತೆಯ ಹೊಸ ಮೆರುಗು ಅದರಲ್ಲಿದೆ. ಹಿಂದೆ ಕನಕದಾಸರ ಬಗ್ಗೆ ಅವರೊಂದು ಪದ್ಯವನ್ನು ಬರೆದದ್ದನ್ನು ಬೇಂದ್ರೆಯವರು ಬಹುವಾಗಿ ಮೆಚ್ಚಿದ್ದರಂತೆ. ಕನಕದಾಸರ ಮನೆಗೆ ಕನ್ನ ಹಾಕಿದ ಕಳ್ಳ ಕನಕ ಸಿಗಲಿಲ್ಲ ಎಂಬ ಪದ್ಯವನ್ನು ಬೇಂದ್ರೆ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಉಲ್ಲೇಖಿಸುತ್ತ ಈ ಪದ್ಯದಲ್ಲೊಂದು ಕ್ರಾಂತಿಯಿದೆ ಎಂದಿದ್ದರಂತೆ. ಬನ್ನಂಜೆಯವರು ಕನಕದಾಸರ ಹಾಡುಗಳ ಮೂಲಕವೇ ಕನಕದಾಸರ ಸಾಹಿತ್ಯವನ್ನು ವಿಶ್ಲೇಷಿಸಿ ಬರೆದ ಕನಕೋಪನಿಷತ್ತು ಕನಕದಾಸರನ್ನು ಕುರಿತು ಹೊರಬಂದ ಕೃತಿಗಳಲ್ಲಿ ಅದ್ಭುತವಾದುದು. ಸೃಜನಶೀಲವಾದುದು. ನ ಅನ್ಯವಾದುದು. ಕನಕರ ಬಗ್ಗೆ ಅವರ ಮಾತುಗಳನ್ನು ಕೇಳಿ: ಹೌದು, ದಾಸರ ಮನೆಗೆ ಕನ್ನ ಹಾಕಿದರೆ ಕನಕ ಸಿಗುತ್ತದೆಯ? ಅವರೇ ಅಪ್ಪಟ ಕನಕ. ಕನಕದಾಸರು ಏರಿದ ಎತ್ತರ ಬಹಳ ದೊಡ್ಡದು. ಅವರು ಕನ್ನಡ ವಾಙ್ಮಯಕ್ಕೆ ವಿಶೇಷತಃ ದಾಸಸಾಹಿತ್ಯಕ್ಕೆ ಜಾನಪದದ ಸೊಬಗು ನೀಡಿದವರು. ಹರಿದಾಸ ಪಂಥದ ಆಧಾರಸ್ತಂಭವಾದ ಮಹಾನ್ ಪ್ರವಾದಿಗಳಲ್ಲೊಬ್ಬರು.

ಕನಕದಾಸರ ಏಕೆ ನಡುಗಿದೆ ತಾಯಿ ಭೂಮಿ ನಡುರಾತ್ರಿಯೊಳು– ಎಂಬ ಸಂಭಾಷಣೆಯ ರೂಪದಲ್ಲಿರುವ ಹಾಡಿನ ಅರ್ಥವನ್ನು ವಿವರಿಸುತ್ತ ಕನಕಗುಡಿಯ ಬಗ್ಗೆ ಹೀಗೆ ವಿಶ್ಲೇಷಣೆಯನ್ನು ನೀಡುತ್ತಾರೆ: ಕನಕದಾಸರ ಕಾಲದಲ್ಲಿ ಉಡುಪಿಯಲ್ಲಿ ಪುಟ್ಟ ಭೂಕಂಪವಾದದ್ದು. ಅದನ್ನವರು ತಿರುಪತಿಯ ಸನ್ನಿಧಾನದಲ್ಲಿ ಗುರುವಿನ ಬಳಿ ಹೇಳಿಕೊಂಡದ್ದು. ಪ್ರಾಯಃ ಆ ಗುರು ವಾದಿರಾಜರೇ ಆಗಿರಬೇಕು. ಏಕವಚನದ ಸಲುಗೆಯೂ ವಾದಿರಾಜರೆಂದೇ ಸಮರ್ಥನೆಯನ್ನೂ ಅವರು ನೀಡುವುದು. ಗುರುವೆ ಕೇಳಯ್ಯ, ಯತಿಯೆ ನೋಡಯ್ಯ ಎನ್ನುವಲ್ಲೂ ಬನ್ನಂಜೆಯವರು ವಾದಿರಾಜರಲ್ಲೇ ಕನಕದಾಸರು ಹೇಳಿಕೊಂಡದ್ದು ಎನ್ನುತ್ತಾರೆ. ಮತ್ತು ಈ ಭೂಕಂಪಕ್ಕೆ ತಾನೇ ಕಾರಣವಾದೆನೋ ಎಂಬ ಪರಿಹಾಸದ ನುಡಿಯು ಅದರಲ್ಲಿದೆಯೆಂಬುದು, ಮತ್ತದು ಪರಿಹಾಸ ಮಾತ್ರವಲ್ಲ, ವಾಸ್ತವ ಕೂಡ ಎನ್ನುವುದು ದಾಸರಿಗೆ ಮತ್ತು ವಾದಿರಾಜರಿಗೆ ಮಾತ್ರ ತಿಳಿದ ಸಂಗತಿಯೆನ್ನುತ್ತಾರೆ ಬನ್ನಂಜೆಯವರು. ಧರೆಯೊಳಗೆ ಕರ್ಮಿಗಳು ಹೆಚ್ಚಿ ಎಂಬಲ್ಲಿ ಕರ್ಮಿಗಳು ಎಂದರೆ ವೈದಿಕ ಕರ್ಮಗಳನ್ನು ಆಚರಣೆ ಮಾಡುವವರು. ಅನುಷ್ಠಾನವಂತರು. ಹಿಂದೆ ಕೆಲವರು ಹಾರುವರು ಮಾತ್ರ ಕರ್ಮಿಗಳಾಗುತ್ತಿದ್ದರು. ಈಗ ಕರ್ಮಿಗಳ ಸಂಖ್ಯೆ ಹೆಚ್ಚಿಬಿಟ್ಟಿದೆ. ಕಲಿಗಾಲ. ಕುರಿಕಾಯುವ ನರಕುರಿಗಳೂ ಕರ್ಮಿಗಳಾಗಿ ಬಿಟ್ಟಿದ್ದಾರೆ. ಜತೆಗೆ ಕವಿತ್ವವನ್ನೂ ಕಲಿತು ಹಾಡು ಹೊಸೆಯತೊಡಗಿದ್ದಾರೆ. ಹೀಗೆ ಮಂದಿ ನಡೆಗೆಟ್ಟರೆಂದು ನಡುಗಿದೆಯೆ ತಾಯಿ? ಎಂದು ಕನಕರು ಕೇಳುವಲ್ಲಿ ಪರಿಹಾಸದಲ್ಲೂ ಬಂಡಾಯವನ್ನು ಕಾಣಲು ಸಾಧ್ಯವಿದೆ. ಇದು ತನ್ನನ್ನೆ ಕುರಿತು ಕನಕದಾಸರ ಪರಿಹಾಸ. ಅವರ ಕುಲಬಾಂಧವರು ಮತ್ತು ಮಡಿವಂತರು ಅವರ ಬಗೆಗೆ ಆಡುತ್ತಿದ್ದ ಮಾತನ್ನು ಅವರೇ ಆಡಿಕೊಂಡು ನಗುತ್ತಾರೆ. ಊರ ಮಂದಿಗೆ ಇಷ್ಟವಾಗದ ತನ್ನ ನಡೆ ಪೊಡವಿಗೊಡೆಯಗೆ ಇಷ್ಟವಾಯಿತು. ಪೊಡವಿಗೊಡೆಯನ ರಾಣಿಗೆ ಇಷ್ಟವಾಯಿತು. ಅದಕೆಂದೆ ಅವಳು ನಡುಗಿದಳು. ನಡುಗಿ ಕೃಷ್ಣನ ದರ್ಶನ ಮಾಡಿಸಿದಳು. ಇದು ಸೊಲ್ಲಿನ ಒಳಗಿನ ಧ್ವನಿಯೆಂದು ಬನ್ನಂಜೆಯವರು ಗ್ರಹಿಸುತ್ತಾರೆ. ಈ ದೃಷ್ಟಿಯಿಂದ ಈ ಹಾಡು ತುಂಬ ಮಹತ್ವದ್ದು ಎನ್ನುತ್ತಾರೆ ಬನ್ನಂಜೆಯವರು. ಇದನ್ನು ಈ ತನಕವೂ ಯಾರೂ ಗಮನಿಸದೆ ಇದ್ದದ್ದು ನಿಜಕ್ಕೂ ವಿಸ್ಮಯಕಾರಕ ಎಂಬುದು ಅವರ ಅಭಿಪ್ರಾಯ.



ಟಿ. ದೇವಿದಾಸ್

**ಮುಂದುವರೆಯಲಿದೆ........**

## ಬರ ಪರಿಸ್ಥಿತಿ ನಿರ್ವಹಣೆ: ಅಧಿಕಾರಿಗಳು ಕಡ್ಡಾಯವಾಗಿ ಕ್ಷೇತ್ರ ಭೇಟಿ ನೀಡಲು ಸಚಿವ ಬಿ. ನಾಗೇಂದ್ರ ಸೂಚನೆ

● ವಿಕ್ರಮ ವಾಹಿನಿ । ಬಳ್ಳಾರಿ

ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮತ್ತು ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಲು ಸರ್ಕಾರದ ಆದೇಶದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಕ್ಷೇತ್ರ ಭೇಟಿ ನಡೆಸಬೇಕು ಎಂದು ಕರ್ನಾಟಕ ಸರ್ಕಾರದ ಸಂಪುಟ ದರ್ಜೆ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಅತಿವೃಷ್ಟಿ ಮತ್ತು ಬರ ಪರಿಸ್ಥಿತಿ ನಿರ್ವಹಣೆಯ ಮೇಲುಸ್ತುವಾರಿ ಸಚಿವ ಬಿ. ನಾಗೇಂದ್ರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲೆಯ ಬರಪರಿಸ್ಥಿತಿ ಕುರಿತು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಮುಖ್ಯಮಂತ್ರಿಗಳ ಕಟ್ಟುನಿಟ್ಟಿನ ನಿರ್ದೇಶನದಂತೆ ಯಾವುದೇ ಅಧಿಕಾರಿಗಳು ಕೇಂದ್ರಸ್ಥಾನ ಬಿಡದೆ, ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ವೀಕ್ಷಿಸಬೇಕು.



ಸಚಿವ ಬಿ.ನಾಗೇಂದ್ರ ಅವರು ಮಾತನಾಡಿ, ರಸಗೊಬ್ಬರ ಖರೀದಿಸುವಾಗ ರೈತರಿಗೆ ಅನಗತ್ಯವಾಗಿ ಇತರ ಸೂಕ್ಷ್ಮ ಪೋಷಕಾಂಶಗಳನ್ನು ಬಲವಂತವಾಗಿ ಜೋಡಿಸಿ ಮಾರಾಟ ಮಾಡುವ ಸಾಗಣೆದಾರರು ಮತ್ತು ಡೀಲರ್‌ಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ನಿಯಮ ಉಲ್ಲಂಘಿಸುವ ಮಾರಾಟಗಾರರ ವಿರುದ್ಧ ರಸಗೊಬ್ಬರ ನಿಯಂತ್ರಣ ಕಾಯ್ದೆ ಹಾಗೂ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ನೀರಾವರಿ ನೀರು ಕೊರತೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ, ಸಾಂಪ್ರದಾಯಿಕ ನೀರು ಭರಿತ ಭತ್ತದ ಬೇಸಾಯದ ಬದಲು 'ಕೂರಿಗೆ ಪದ್ಧತಿ' ಮೂಲಕ ಭತ್ತ ಬೆಳೆಯಲು ರೈತರನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದರೆ ಕೂರಿಗೆ ಪದ್ಧತಿಯಲ್ಲಿ ಶೇ. 60 ರಷ್ಟು ನೀರು ಉಳಿತಾಯವಾಗಲಿದ್ದು, ಕೇವಲ ಶೇ. 40 ರಷ್ಟು ನೀರಿನ ಅಗತ್ಯವಿರುತ್ತದೆ. ಈ ಪದ್ಧತಿಯಲ್ಲಿ ಪ್ರತಿ ಹೆಕ್ಟೇರ್‌ಗೆ 62.5 ಕೆಜಿ ಬೀಜ ಬೇಕಿದ್ದರೆ, ಕೂರಿಗೆ ಪದ್ಧತಿಯಲ್ಲಿ ಕೇವಲ 12.5 ಕೆಜಿ ಬೀಜ ಸಾಕು. ಇದರಿಂದ ರೈತರ ಉತ್ಪಾದನಾ ವೆಚ್ಚ ಗಣನೀಯವಾಗಿ ಕಡಿಮೆಯಾಗುತ್ತದೆ. ಸಾಮಾನ್ಯ ಪದ್ಧತಿಯಲ್ಲಿ ಪ್ರತಿ ಹೆಕ್ಟೇರ್‌ಗೆ 60 ರಿಂದ 70 ಕ್ವಿಂಟಲ್ ಇಳುವರಿ ಬಂದರೆ, ಕೂರಿಗೆ ಪದ್ಧತಿಯಲ್ಲಿ 40 ರಿಂದ 45 ಕ್ವಿಂಟಲ್ (ಕೆಲವು ಕಡೆ 60 ಕ್ವಿಂಟಲ್ ವರೆಗೂ) ಇಳುವರಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಸಂಡೂರು ಭಾಗದ ಮೆಟ್ರಿಕಿ ಮತ್ತು ವಿಟ್ಲಾಪುರ ಭಾಗಗಳಲ್ಲಿ ಜಾನುವಾರುಗಳ ಮೇವಿಗೆ ತೀವ್ರ ಅಭಾವ ಎದುರಾಗಿದೆ. ಈ ಪೈಕಿ ವಿಟ್ಲಾಪುರದಲ್ಲಿ ಮೇವಿಗೆ ಹೆಚ್ಚಿನ ಬೇಡಿಕೆಯಿದೆ. ನೀರಾವರಿ ಸೌಲಭ್ಯವಿರುವ ರೈತ ಕುಟುಂಬಕ್ಕೆ ಕಿಟ್‌ಗಳನ್ನು ವಿತರಣೆ ಮಾಡಬೇಕು. ಬರ ಘೋಷಣೆಯಾಗುವವರೆಗೆ ಕಾಯದೆ, ಸದ್ಯದ ಅಭಾವ ಪೂರೈಸಲು ಜಿಲ್ಲೆಯಾದ್ಯಂತ ಪ್ರತಿಯೊಂದು ಮನೆಗೆ ತೆರಳಿ ಜಾನುವಾರುಗಳ ಸಮೀಕ್ಷೆ ನಡೆಸಬೇಕು ಎಂದು ಪಶು ಸಂಗೋಪನಾ ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಡಾ.ಬಾಬು ಜಗಜೀವನರಾಂ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ನ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್, ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್ ಬಸವರಾಜ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಎಲ್ಲಾ ತಾಲೂಕು ತಹಶೀಲ್ದಾರರು ಹಾಗೂ ಇತರರು ಉಪಸ್ಥಿತರಿದ್ದರು.

## ವರ್ಕ್ ಫ್ರಂ ಹೋಮ್ ಆಮಿಷ: 6.6 ಕೋಟಿ ರೂ. ವಂಚನೆ

● ವಿಕ್ರಮ ವಾಹಿನಿ । ಕೋಲಾರ

'ವರ್ಕ್ ಫ್ರಂ ಹೋಂ' ಹೆಸರಿನಲ್ಲಿ ನಿರುದ್ಯೋಗಿಗಳಿಗಳಿಂದ ಹಣ ಪಡೆದು, ಠೇವಣಿ ಇರಿಸಿಕೊಂಡು ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಪ್ರಕರಣದಲ್ಲಿ 'ಶ್ರೀಕಾಳಿಕಾದೇವಿ ಎಂಟರ್ ಪ್ರೈಸಸ್' ಸಂಸ್ಥೆಯ 20 ಜನರ ಪ್ರಕರಣ ದಾಖಲಾಗಿದ್ದು, ವ್ಯವಸ್ಥಾಪಕಿ ರಮ್ಯಾ ಎನ್ನುವರು ಪೊಲೀಸರ ಬಂಧಿಯಾಗಿದ್ದಾರೆ.

ಉದ್ಯೋಗದ ಭರವಸೆ ನೀಡಿ ರೂ. 6.68 ಕೋಟಿ ವಂಚನೆ ಆರೋಪ ಪ್ರಕರಣದಲ್ಲಿ ಸಂಸ್ಥೆಯ ಮಾಲೀಕರೂ ಆಗಿರುವ ಬೆಂಗಳೂರು ಮೂಲದ ದಂಪತಿ ಆರತಿ ಎಸ್. ಹಾಗೂ ಭೂಮಿಶೆಟ್ಟಿ ಕಿರಣ್ ವಿರುದ್ಧವೂ ಎಫ್ ಐ ಆರ್ ದಾಖಲಾಗಿದ್ದು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಜಾಲ ವಿಸ್ತರಿಸಿದೆ. ಸಂಸ್ಥೆಯ ಮಾತು ನಂಬಿ ಠೇವಣಿ ಇರಿಸಿದ್ದ ಶ್ರೀರಾಮ ಹಾಗೂ ಇತರ ಸಂತ್ರಸ್ತರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆಗೆ ಇಳಿದ ಗಲ್‌ಪೇಟೆ ಪೊಲೀಸರು, ಮ್ಯಾನೇಜರ್ ರಮ್ಯಾ ಎಂಬುವರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ. ಇನ್ನುಳಿದ ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ರೂ. 10 ಸಾವಿರ ಠೇವಣಿ ಇಟ್ಟರೆ 10 ಕೆ.ಜಿ ಅಗರಬತ್ತಿ ನೀಡಿ ಅದನ್ನು ಪ್ಯಾಕ್ ಮಾಡಿ ವಾಪಸ್ ಕೊಟ್ಟರೆ ಪ್ರತಿ ತಿಂಗಳು ರು. 1,850 ಕೊಡುತ್ತಾರೆ. ಹೀಗೆ, 13.5 ಲಕ್ಷದವರೆಗೆ ಠೇವಣಿ ಇಡುವ ಸ್ಕೀಂಗಳು ಇದ್ದು, 2,500ಕ್ಕೂ ಅಧಿಕ ಜನರಿಂದ ಲಕ್ಷಾಂತರ ರೂಪಾಯಿ ಠೇವಣಿ ಕಟ್ಟಿಸಿಕೊಂಡಿದ್ದಾರೆ. ಲಕ್ಷಗಟ್ಟಲೇ ಲಾಭ ಪಡೆದುಕೊಳ್ಳಿ ಎಂದು ನಾಗರಿಕರನ್ನು ನಂಬಿಸಿದ್ದರು. ಅಗರಬತ್ತಿಯನ್ನೂ ನೀಡಿಲ್ಲ, ಹಣವನ್ನೂ ನೀಡಿಲ್ಲ ಎಂದು ಸಂತ್ರಸ್ತರು ದೂರಿದ್ದಾರೆ.

## ಪರಿಸರ ಸ್ನೇಹಿ ಗಣೇಶ ಹಬ್ಬ: ಪಿ.ಓ.ಪಿ. ವಿಗ್ರಹಗಳಿಗೆ ಸಂಪೂರ್ಣ ನಿಷೇಧ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯದಲ್ಲಿ ಈ ಬಾರಿ ಗಣೇಶ ಹಬ್ಬವು ಹೊಸ ಅರ್ಥ ಪಡೆದುಕೊಂಡಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದಂತೆ ಪ್ಲಾಸ್ಟರ್ ಆಫ್ ಪ್ಯಾರೀಸ್ ಹಾಗೂ ರಾಸಾಯನಿಕ ಬಣ್ಣಗಳಿಂದ ತಯಾರಿಸಲಾದ ಗಣೇಶ ವಿಗ್ರಹಗಳಿಗೆ ಸಂಪೂರ್ಣ ನಿಷೇಧ ಜಾರಿಯಾಗಿದೆ, ಈ ಸಂಬಂಧಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ 2026ನೇ ಸಾಲಿನ ಗಣೇಶ ಹಬ್ಬದ ಅಂಗವಾಗಿ ಮಹತ್ವದ ಆದೇಶ ಹೊರಡಿಸಿದೆ.

ಈ ನಿರ್ಧಾರವು ಕೇವಲ ಕಾನೂನು ಕ್ರಮವಲ್ಲ, ಅದು ನಮ್ಮ ನದಿಗಳು, ಕೆರೆಗಳು, ಜಲಮೂಲಗಳು ಮತ್ತು ಜಲಚರ ಜೀವಿಗಳ ರಕ್ಷಣೆಯತ್ತ ಒಂದು ಭಾವನಾತ್ಮಕ ಹೆಜ್ಜೆಯಾಗಿದೆ.



ಗಣೇಶನನ್ನು ಮಣ್ಣಿನಿಂದ ರೂಪಿಸುವುದು, ನೈಸರ್ಗಿಕ ಬಣ್ಣಗಳಿಂದ ಅಲಂಕರಿಸುವುದು, ಪರಿಸರ ಸ್ನೇಹಿ ವಸ್ತುಗಳಿಂದ ಹಬ್ಬವನ್ನು ಆಚರಿಸುವುದು ಇವೆಲ್ಲವೂ ನಮ್ಮ ಭಕ್ತಿಗೆ ಹೊಸ ಶುದ್ಧತೆಯನ್ನು ನೀಡುತ್ತವೆ. ಪಿಒಪಿ ವಿಗ್ರಹಗಳು ನೀರಿನ ಗುಣಮಟ್ಟವನ್ನು ಹಾಳುಮಾಡಿ ಜೀವಜಗತ್ತಿಗೆ ಅಪಾಯ ತಂದಿದ್ದರೆ, ಮಣ್ಣಿನ ವಿಗ್ರಹಗಳು ಪ್ರಕೃತಿಯೊಂದಿಗೆ ನಮ್ಮ ಸಂಬಂಧವನ್ನು ಮತ್ತಷ್ಟು ಗಾಢಗೊಳಿಸುತ್ತವೆ.

ಪ್ಲಾಸ್ಟರ್ ಆಫ್ ಪ್ಯಾರೀಸ್ ಹಾಗೂ ರಾಸಾಯನಿಕ ಬಣ್ಣಗಳಿಂದ ತಯಾರಿಸಲಾದ ಗಣೇಶ ವಿಗ್ರಹಗಳ ಉತ್ಪಾದನೆ, ಸಂಗ್ರಹ, ಮಾರಾಟ ಮತ್ತು ವಿಸರ್ಜನೆಗೆ ರಾಜ್ಯಾದ್ಯಂತ ಸಂಪೂರ್ಣ ನಿಷೇಧ ಜಾರಿಯಾಗಿದೆ.ಪರಿಸರ ಸಂರಕ್ಷಣೆ, ಸಾರ್ವಜನಿಕ ಆರೋಗ್ಯ ಹಾಗೂ ಜಲಮೂಲಗಳ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ. ಪಿಒಪಿ ಹಾಗೂ ರಾಸಾಯನಿಕ ಬಣ್ಣಗಳಿಂದ ತಯಾರಿಸಲಾದ ವಿಗ್ರಹಗಳು ಕೆರೆ, ನದಿ, ಜಲಾಶಯಗಳಲ್ಲಿ ನೀರಿನ ಗುಣಮಟ್ಟ ಕುಸಿಯಲು ಈ ಆದೇಶದಂತೆ ಪಿಒಪಿ ವಿಗ್ರಹಗಳ ತಯಾರಿಕೆ, ಸಂಗ್ರಹಣೆ, ಮಾರಾಟ, ವಿತರಣೆ ಹಾಗೂ ಸಾರ್ವಜನಿಕ ಪ್ರದರ್ಶನಕ್ಕೆ ಅನುಮತಿ ಇಲ್ಲ. ಭಾರಲೋಹ ಮಿಶ್ರಿತ ರಾಸಾಯನಿಕ ಬಣ್ಣಗಳಿಂದ ಅಲಂಕರಿಸಿದ ವಿಗ್ರಹಗಳ ಉತ್ಪಾದನೆ ಹಾಗೂ ಮಾರಾಟವೂ ನಿಷೇಧಿಸಲಾಗಿದೆ. ಸಾರ್ವಜನಿಕರು ಹಾಗೂ ಗಣೇಶೋತ್ಸವ ಸಮಿತಿಗಳು ಮಣ್ಣಿನ ವಿಗ್ರಹಗಳು ಹಾಗೂ ಪರಿಸರ ಸ್ನೇಹಿ ವಸ್ತುಗಳಿಂದ ತಯಾರಿಸಲಾದ ವಿಗ್ರಹಗಳನ್ನು ಮಾತ್ರ ಬಳಸಬೇಕು. ಪಿಒಪಿ ವಿಗ್ರಹಗಳನ್ನು ಯಾವುದೇ ಜಲಮೂಲಗಳಲ್ಲಿ ವಿಸರ್ಜನೆ ಮಾಡಬಾರದು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

ಸ್ಥಳೀಯ ಸಂಸ್ಥೆಗಳು ಪರಿಸರ ಸ್ನೇಹಿ ಆಚರಣೆ ಕುರಿತು ವ್ಯಾಪಕ ಜಾಗೃತಿ ಮೂಡಿಸಬೇಕೆಂದು ಸೂಚಿಸಲಾಗಿದೆ. ಜಿಲ್ಲಾಧಿಕಾರಿಗಳು, ಪೊಲೀಸ್ ಇಲಾಖೆ, ಸ್ಥಳೀಯ ಸಂಸ್ಥೆಗಳು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಜಂಟಿಯಾಗಿ ಈ ಆದೇಶದ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲಿದ್ದಾರೆ. ಉಲ್ಲಂಘನೆ ಕಂಡುಬಂದಲ್ಲಿ ಸಂಬಂಧಿತ ಕಾನೂನುಗಳಡಿ ವಶಪಡಿಸಿಕೊಳ್ಳುವ ಹಾಗೂ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ಬಾರಿ ಗಣೇಶ ಹಬ್ಬವನ್ನು ಮಣ್ಣಿನ ವಿಗ್ರಹಗಳೊಂದಿಗೆ, ಪರಿಸರ ಸ್ನೇಹಿಯಾಗಿ ಆಚರಿಸುವಂತೆ ರಾಜ್ಯ ಸರ್ಕಾರ ಸಾರ್ವಜನಿಕರಿಗೆ ಮನವಿ ಮಾಡಿದೆ.




**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರ ಸೂಚನೆಯ ಮೇರೆಗೆ ರಾಜ್ಯದ ವಿವಿಧ ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಜಾಗೃತಿ ಜಾಥಾ ಆಯೋಜಿಸಲಾಗುತ್ತಿದೆ.**

## ಕೈಮಗ್ಗ ದಿನ ಆಚರಿಸಿ: ಮೋದಿ ಮನವಿ

1ನೇ ಪುಟದಿಂದ

ಭಾರತದಲ್ಲಿ ಪ್ರತಿ ವರ್ಷ ಆಗಸ್ಟ್ 7ರಂದು ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ. 1905ರ ಸ್ವದೇಶಿ ಚಳುವಳಿಯ ಆರಂಭವನ್ನು ಸ್ಮರಿಸುವ ಉದ್ದೇಶದಿಂದ 2015ರಿಂದ ಈ ದಿನವನ್ನು ಅಧಿಕೃತವಾಗಿ ಆಚರಿಸಲಾಗುತ್ತಿದೆ.

ಭಾರತದ ಕೈಮಗ್ಗ ಕ್ಷೇತ್ರವು ಕೃಷಿಯ ನಂತರ ಅತಿಹೆಚ್ಚು ಉದ್ಯೋಗ ಒದಗಿಸುವ ಸಾಂಪ್ರದಾಯಿಕ ವಲಯಗಳಲ್ಲಿ ಒಂದಾಗಿದೆ.

'ವೋಕಲ್ ಫಾರ್ ಲೋಕಲ್' ಮತ್ತು 'ಆತ್ಮನಿರ್ಭರ್ ಭಾರತ್' ಅಭಿಯಾನದ ಭಾಗವಾಗಿ ದೇಶೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವತ್ತ ಕೇಂದ್ರ ಸರ್ಕಾರ ಒತ್ತು ನೀಡುತ್ತಿದೆ. ಕೈಮಗ್ಗ ಉತ್ಪನ್ನಗಳ ಬಳಕೆ ಹೆಚ್ಚಿದರೆ ಸ್ಥಳೀಯ ನೇಕಾರರಿಗೆ ಮಾರುಕಟ್ಟೆ ವಿಸ್ತರಣೆಯಾಗುವುದರ ಜೊತೆಗೆ ಭಾರತದ ಸಾಂಪ್ರದಾಯಿಕ ನೇಕಾರಿಕೆ ಕಲೆಗೂ ಮತ್ತಷ್ಟು ಪ್ರೋತ್ಸಾಹ ದೊರೆಯಲಿದೆ.

## ರೇಣುಕಾಸ್ವಾಮಿ ಪ್ರಕರಣ: ಮೂವರು ಮಾಫಿ ಸಾಕ್ಷಿಗೆ ಸಿದ್ಧ

1ನೇ ಪುಟದಿಂದ

ಪ್ರಾಸಿಕ್ಯೂಷನ್ ಪರ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನಕುಮಾರ್, ಪ್ರದೂಷ್ ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡು, ನ್ಯಾಯಾಲಯದ ಮುಂದೆ ಹೇಳಿಕೆ ದಾಖಲಿಸಲು ಅವಕಾಶ ನೀಡಬೇಕು ಎಂದು ವಾದಿಸಿದರು. ಮಾಫಿ ಸಾಕ್ಷಿಯ ಹೇಳಿಕೆ ಪ್ರಕರಣದ ತನಿಖೆಗೆ ನೆರವಾಗಲಿದೆ ಎಂದೂ ಅವರು ತಿಳಿಸಿದರು.

ಎರಡೂ ಕಡೆಯ ವಾದ ಆಲಿಸಿದ ನ್ಯಾಯಾಲಯ, ಮಾಫಿ ಸಾಕ್ಷಿ ಅರ್ಜಿಯ ಕುರಿತು ಸಹ ಆರೋಪಿಗಳ ಆಕ್ಷೇಪಣೆಗಳನ್ನು ಪರಿಗಣಿಸಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆಯ ಕುರಿತು ಆದೇಶವನ್ನು ಆಗಸ್ಟ್ 10ಕ್ಕೆ ಕಾಯ್ದಿರಿಸಿದೆ.

2024ರ ಜೂನ್ 8ರಂದು ನಡೆದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್, ನಟಿ ಪವಿತ್ರಾ ಗೌಡ ಸೇರಿದಂತೆ ಒಟ್ಟು 17 ಮಂದಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ಮುಂದುವರಿದಿದೆ.

## ಗೋಬರ್ಧನ್‌ಗೆ ಕೇಂದ್ರ ಅಸ್ತು

1ನೇ ಪುಟದಿಂದ

ಎಂಎಸ್ಎಂಇ ಆಧಾರಿತ ಯೋಜನೆಗಳಿಗೆ ವಿಶೇಷ ಸಾಲ ಖಾತರಿ ಸೌಲಭ್ಯವೂ ಕಲ್ಪಿಸಲಾಗಿದೆ.

ಯೋಜನೆಯಡಿ ದೇಶಾದ್ಯಂತ 200ಕ್ಕೂ ಹೆಚ್ಚು ಸಿಬಿಜಿ ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದ್ದು, ಹೂಡಿಕೆದಾರರು ಹಾಗೂ ಸಾಲದಾತರಿಗೆ ಅನುಕೂಲವಾಗುವಂತೆ ಸಮಗ್ರ ಸಿಬಿಜಿ ಮೌಲ್ಯ ಸರಪಳಿ ವ್ಯವಸ್ಥೆಯನ್ನೂ ರೂಪಿಸಲಾಗುತ್ತದೆ.

## ಸಂಪುಟ ಕಿಚ್ಚು: ಹಲವು ಕಡೆ ಬಂದ್

1ನೇ ಪುಟದಿಂದ

ವ್ಯಾಪಾರ ವಹಿವಾಟು, ಬಸ್ ಹಾಗೂ ಆಟೋ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ದಲಿತ ಸಂಘಟನೆಗಳು, ವರ್ತಕರ ಸಂಘ, ಆಟೋ ಚಾಲಕರ ಸಂಘ ಹಾಗೂ ರೈತ ಸಂಘ ಸೇರಿದಂತೆ ಹಲವು ಸಂಘಟನೆಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದವು. ಮೂರು ಬಾರಿ ಶಾಸಕರಾಗಿದ್ದ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡದೇ ಅನ್ಯಾಯ ಮಾಡಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲೂ ಶಾಸಕ ಬಸವರಾಜ ಶಿವಣ್ಣನವರ್ ಬೆಂಬಲಿಗರು ಮೆರವಣಿಗೆ ನಡೆಸಿ, ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಒತ್ತಾಯಿಸಿದರು. ಉತ್ತರ ಕರ್ನಾಟಕದ ಕುರುಬ ಸಮುದಾಯಕ್ಕೆ ಸಮರ್ಪಕ ಪ್ರಾತಿನಿಧ್ಯ ನೀಡಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಮೊದಲು ಬಾಗೇಪಲ್ಲಿ ಶಾಸಕ ಸುಬ್ಬಾರೆಡ್ಡಿ ಬೆಂಬಲಿಗರು ಮೂರು ತಾಲೂಕುಗಳಲ್ಲಿ ಬಂದ್ ನಡೆಸಿ ಪ್ರತಿಭಟನೆ ವ್ಯಕ್ತಪಡಿಸಿದ್ದರು. ಸಚಿವ ಸಂಪುಟ ವಿಸ್ತರಣೆಯ ಬಳಿಕ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಕಿಚ್ಚು ಇನ್ನೂ ತಣ್ಣಗಾಗದಿರುವುದು ಈ ಬೆಳವಣಿಗೆಗಳಿಂದ ಸ್ಪಷ್ಟವಾಗಿದೆ.

## ಅತ್ಯಾಚಾರ ಪ್ರಕರಣದಲ್ಲಿ ತೇಜ್‌ಪಾಲ್‌ಗೆ 10 ವರ್ಷ ಜೈಲು

1ನೇ ಪುಟದಿಂದ

2021ರಲ್ಲಿ ಟ್ರಯಲ್ ಕೋರ್ಟ್ ನೀಡಿದ್ದ ಖುಲಾಸೆ ತೀರ್ಪನ್ನು ರದ್ದುಪಡಿಸಿದ ಹೈಕೋರ್ಟ್, ತೇಜ್‌ಪಾಲ್ ಅವರನ್ನು ಅತ್ಯಾಚಾರ ಪ್ರಕರಣದಲ್ಲಿ ದೋಷಿ ಎಂದು ಘೋಷಿಸಿತು. ನ್ಯಾಯಮೂರ್ತಿಗಳಾದ ಡಾ. ನೀಲಾ ಗೋಖಲೆ ಹಾಗೂ ಅಮಿತ್ ಜಮ್ಸಾಂದೇಕರ್ ಅವರಿದ್ದ ವಿಭಾಗೀಯ ಪೀಠ ಈ ತೀರ್ಪು ನೀಡಿತು. ಶಿಕ್ಷೆ ಜಾರಿಗೊಳಿಸಲು ತೇಜ್‌ಪಾಲ್ ಅವರಿಗೆ ಎರಡು ವಾರಗಳೊಳಗೆ ಶರಣಾಗುವಂತೆ ನ್ಯಾಯಾಲಯ ಸೂಚಿಸಿದೆ.

ಪ್ರಕರಣವು 2013ರ ನವೆಂಬರ್‌ನಲ್ಲಿ ಗೋವಾದ ಹೋಟೆಲ್ ಲಿಫ್ಟ್‌ನಲ್ಲಿ ತೆಹಲ್ಕಾ ಸಂಸ್ಥೆಯ ಕಿರಿಯ ಮಹಿಳಾ ಸಹೋದ್ಯೋಗಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದೆ.

2017ರಲ್ಲಿ ವಿಚಾರಣೆ ಆರಂಭವಾಗಿದ್ದು, 2021ರಲ್ಲಿ ಟ್ರಯಲ್ ಕೋರ್ಟ್ ಅವರನ್ನು ಖುಲಾಸೆಗೊಳಿಸಿತ್ತು. ಬಳಿಕ ಗೋವಾ ಸರ್ಕಾರ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ರಾಜ್ಯ ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿ, ಲೈಂಗಿಕ ದೌರ್ಜನ್ಯ ಸಂತ್ರಸ್ತೆಯ ವರ್ತನೆಯನ್ನು ಪೂರ್ವಗ್ರಹದ ಆಧಾರದಲ್ಲಿ ಮೌಲ್ಯಮಾಪನ ಮಾಡಿದ ಟ್ರಯಲ್ ಕೋರ್ಟ್ ಗಂಭೀರ ತಪ್ಪು ಮಾಡಿದೆ ಎಂದು ವಾದಿಸಿದರು.

ಈ ವಾದವನ್ನು ಒಪ್ಪಿದ ಹೈಕೋರ್ಟ್, "ಆದರ್ಶ ಸಂತ್ರಸ್ತೆ ಹೇಗೆ ವರ್ತಿಸಬೇಕು ಎಂಬ ರೂಢಿಗತ ಕಲ್ಪನೆಗಳ ಆಧಾರದಲ್ಲಿ ಟ್ರಯಲ್ ಕೋರ್ಟ್ ತೀರ್ಪು ನೀಡಿದೆ. ಘಟನೆ ಬಳಿಕ ಸಂತ್ರಸ್ತೆ ನಗುತ್ತಾ ಕಾಣಿಸಿಕೊಂಡಿದ್ದನ್ನು ಸಹ ಆಕೆಯ ವಿರುದ್ಧ ಬಳಸಿರುವುದು ನ್ಯಾಯಸಮ್ಮತವಲ್ಲ" ಎಂದು ಅಭಿಪ್ರಾಯಪಟ್ಟಿತು.

ತೀರ್ಪಿನ ಬಳಿಕ ನ್ಯಾಯಾಲಯದಲ್ಲಿ ಮಾತನಾಡಿದ ತರುಣ್ ತೇಜ್‌ಪಾಲ್, "ನಾನು ರಾಜಕೀಯದ ಬಲಿಪಶು. ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತೇನೆ" ಎಂದು ತಿಳಿಸಿದರು. ಅವರನ್ನು ತಕ್ಷಣ ಬಂಧಿಸುವಂತೆ ತುಷಾರ್ ಮೆಹ್ತಾ ನ್ಯಾಯಾಲಯವನ್ನು ಕೋರಿದರೂ, ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ಎರಡು ವಾರಗಳ ಅವಧಿಯನ್ನು ನ್ಯಾಯಾಲಯ ನೀಡಿದೆ.

## 'ಬೆಂಗಳೂರಿನಲ್ಲಿ ಲಾಲ್ ಬಾಗ್ ಮಾದರಿ 3 ಉದ್ಯಾನ ನಿರ್ಮಾಣಕ್ಕೆ ಚಿಂತನೆ'

● ವಿಕ್ರಮ ವಾಹಿನಿ । ಬೆಂಗಳೂರು

"ಬೆಂಗಳೂರಿನಲಿ ಲಾಲ್ ಬಾಗ್ ಮಾದರಿಯ 3 ಉದ್ಯಾನ ನಿರ್ಮಾಣ ಮಾಡಲು ನಮ್ಮ ಸರ್ಕಾರ ಚಿಂತನೆ ನಡೆಸಿದೆ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಲಾಲ್ ಬಾಗ್ ನಲ್ಲಿ 'ಗಂಗ ಸಾಮ್ರಾಜ್ಯ ವೈಭವ' ಪರಿಕಲ್ಪನೆಯಲ್ಲಿ ಆಯೋಜಿಸಲಾಗಿರುವ 220ನೇ ಫಲಪುಷ್ಪ ಪ್ರದರ್ಶನಕ್ಕೆ ಶಿವಕುಮಾರ್ ಅವರು ಗುರುವಾರ ಚಾಲನೆ ನೀಡಿ, ಮಾಧ್ಯಮಗಳೊಂದಿಗೆ ಮಾತನಾಡಿದರು.



"ಬೆಂಗಳೂರಿನಲ್ಲಿರುವ ರಕ್ಷಣಾ ಇಲಾಖೆ ಜಾಗದಲ್ಲಿ ಇಂತಹ ಉದ್ಯಾನ ನಿರ್ಮಾಣ ಮಾಡುವ ಉದ್ದೇಶವಿದೆ. ಈ ಭೂಮಿ ರಕ್ಷಣಾ ಇಲಾಖೆ ವಶದಲ್ಲೇ ಇರುತ್ತದೆ. ಆದರೆ ಅಲ್ಲಿ ಇಂತಹ ಉದ್ಯಾನ ನಿರ್ಮಿಸಲು ಅನುಮತಿ ಬೇಕು ಎಂದು ಪತ್ರ ಬರೆದಿದ್ದು, ಸಧ್ಯದಲ್ಲೇ ರಕ್ಷಣಾ ಸಚಿವರನ್ನು ಭೇಟಿ ಮಾಡುತ್ತೇನೆ. ವಾರಣಾಸಿಯಲ್ಲಿ ರಕ್ಷಣಾ ಇಲಾಖೆ ಜಾಗದಲ್ಲಿ ಉದ್ಯಾನ ನಿರ್ಮಿಸಲು ಪ್ರಧಾನಮಂತ್ರಿಗಳು ಅನುಮತಿ ನೀಡಿದ್ದಾರೆ. ಇದರ ಜೊತೆಗೆ ಬೆಂಗಳೂರು ನಗರದೊಳಗೆ ಇರುವ ಅರಣ್ಯ ಜಾಗದಲ್ಲಿ ಇಂತಹ ಉದ್ಯಾನವನ ನಿರ್ಮಿಸಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಲಾಗಿದೆ.

ಜಿಬಿಎ, ಬಿಡಿಎ, ತೋಟಗಾರಿಕೆ ಇಲಾಖೆ ಸೇರಿದಂತೆ ಇತರ ಇಲಾಖೆಗಳಿಗೆ ಜವಾಬ್ದಾರಿ ವಹಿಸಿ ನಿರ್ಮಿಸಲು ಆಲೋಚಿಸಿದ್ದೇವೆ. ನಮ್ಮ ಕಾಲದಲ್ಲಿ ನಗರದ ಹಸಿರು ಕಾಪಾಡಿ, ಸಾರ್ವಜನಿಕರ ಬದುಕಿಗೆ ಅನುಕೂಲ ಮಾಡಿಕೊಡಲು ಮುಂದಾಗಿದ್ದೇವೆ" ಎಂದು ತಿಳಿಸಿದರು.

ನಾಗರಿಕರು ಬಂದು ಈ ಫಲಪುಷ್ಪ ಪ್ರದರ್ಶನ ಕಣ್ತುಂಬಿಕೊಳ್ಳಬೇಕು:

"ಲಾಲ್ ಬಾಗ್ ಕೇವಲ ಉದ್ಯಾನವನ ಮಾತ್ರವಲ್ಲ. ಇದೊಂದು ಇತಿಹಾಸ. ಗಂಗ ಸಾಮ್ರಾಜ್ಯದಲ್ಲಿ ಕೃಷಿಕರು, ರೈತರ ಇತಿಹಾಸವನ್ನು ಇಟ್ಟುಕೊಂಡು ಈ ಫಲಪುಷ್ಪ ಪ್ರದರ್ಶನವನ್ನು ರೂಪಿಸಲಾಗಿದೆ.

ಗಂಗರು ಆಗಿನ ಕಾಲದಲ್ಲಿ ಕಟ್ಟಿದ್ದ ಕೆರೆಗಳು ಇಂದಿಗೂ ಉಳಿದಿವೆ. ಕಷ್ಟಕಾಲದಲ್ಲಿ ಆ ಕೆರೆಗಳು ರಕ್ಷಣೆ ಮಾಡಿವೆ. ಗಂಗರ ಇತಿಹಾಸ ಸಮಾನತೆ, ಕೃಷಿಕರ ಬದುಕು, ಹೋರಾಟವನ್ನು ಹೊಂದಿದೆ.

ಇದು ನಮ್ಮ ಸಂಸ್ಕೃತಿ, ರೈತರ ಬದುಕು ಹಾಗೂ ಕಲೆಯ ಸಂಭ್ರಮ. ಈ ವರ್ಷದ ಸ್ವಾತಂತ್ರ್ಯ ಸಂಭ್ರಮದಲ್ಲಿ ನಾಡಿನ ಜನತೆ ಈ ಫಲಪುಷ್ಪ ಪ್ರದರ್ಶನ ವೀಕ್ಷಿಸಿ ಆನಂದಿಸಬೇಕು. ಯುವಕರು, ಮಹಿಳೆಯರು, ಹಿರಿಯರು ಸೇರಿದಂತೆ ಎಲ್ಲರೂ ಈ ಪ್ರದರ್ಶನವನ್ನು ಕಣ್ತುಂಬಿಕೊಳ್ಳಬೇಕು ಎಂದು ಮನವಿ ಮಾಡುತ್ತೇನೆ. "ಈ ವರ್ಷ ಗಂಗ ಸಾಮ್ರಾಜ್ಯ ರೂಪುಗೊಂಡಿದೆ. ದಕ್ಷಿಣ ಭಾರತದ ಗಂಗರ ಸಾಮ್ರಾಜ್ಯದ ವೈಭವವನ್ನು ಪುಷ್ಪಗಳ ಮೂಲಕ ಮೂಡಿಸಲಾಗಿದೆ.

ಅವರ ಹೋರಾಟ, ಸಂಸ್ಕೃತಿ ಎಲ್ಲವೂ ಇಲ್ಲಿ ಅನಾವರಣಗೊಂಡಿದೆ. ಗಂಗರ ಇತಿಹಾಸ ಕರ್ನಾಟಕ ರಾಜ್ಯದ ಇತಿಹಾಸದ ಭಾಗ. ತೋಟಗಾರಿಕಾ ಇಲಾಖೆಯವರು ಈ ಪರಿಕಲ್ಪನೆಯನ್ನು ಅತ್ಯುತ್ತಮವಾಗಿ ರೂಪಿಸಿದ್ದಾರೆ" ಎಂದು ಹೇಳಿದರು.

140 ಶಾಸಕರು ಹಾಗೂ 40 ಪರಿಷತ್ ಸದಸ್ಯರಿದ್ದು, ಆ ಪೈಕಿ ನಾವು ಸಚಿವ ಸ್ಥಾನ ನೀಡಲು ಸಾಧ್ಯವಿರುವುದು ಕೇವಲ 33 ಜನರಿಗೆ ಮಾತ್ರ. ನಮ್ಮ ಪಕ್ಷದಲ್ಲಿ ಎಲ್ಲರೂ ಅರ್ಹರೆ. ನಾವು ಅವರ ಆಸೆ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಪ್ರಾಮಾಣಿಕರಾಗಿದ್ದು, ಎಲ್ಲರೂ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ" ಎಂದು ತಿಳಿಸಿದರು.